ವೇತನ ಸಿಕ್ಕುತ್ತಿದೆ. ಆದ್ದರಿಂದ ಇದನ್ನು ಸರಿಯಾದ ರೀತಿಯಲ್ಲಿ ತನಿಖೆ ನಡೆಸಿ ಕಂದಾಯ ಇಲಾಖೆ ಯವರು ಈ ಪಜೆನ್ಸಿ ಜೊತೆಗೆ ಶಾಮೀಲಾಗಿರುವುದನ್ನು ತಪ್ಪಿಸಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಟ್ರಜರಿಯವರಿಗೆ ೬ ತಿಂಗಳಿಗೆ ಒಮ್ಮೆ ಅವರು ಬದುಕಿರುವುದಕ್ಕೆ ಸರ್ಟಿಫಿಕೇಟನ್ನು ತೋರಿಸ ಬೇಕಾಗಿರುತ್ತದೆ. ಈ ನೀತಿ ಏನು ಇದೆ ಇದನ್ನು ತಪ್ಪಿಸಬೇಕು. ಬ್ಯಾಂಕ್ ವೆಗೈರೆ ಮುಖಾಂತರ ಹಣವನ್ನು ತೆಗೆದುಕೊಳ್ಳಲು ವ್ಯವಸ್ಥೆಯನ್ನು ಮಾಡಬೇಕೆಂದು ಅನೇಕ ಜನ ಮಾನ್ಯ ಸದಸ್ಯರು ಹೇಳಿರು ತ್ತಾರೆ ಟ್ರಜರಿಯಿಂದ ಚೆಕ್ಕನ್ನು ಪಡೆದು ಬ್ಯಾಂಕ್‌ನಲ್ಲಿ ಹಣವನ್ನು ಪಡೆಯಲು ಹೋದರೆ ಅಲ್ಲೂ ಸಹ ಮಧ್ಯವರ್ತಿ ಜನರಿಗೆ ಅವಕಾಶವಾಗುತ್ತದೆ. ಆದ್ದರಿಂದ ಅಂಚೆಯ ಮುಖಾಂತರವೇ ವೃದ್ಧಾಪ್ಯ ವೇತನವನ್ನು ಕಳುಹಿಸಲು ನಮ್ಮ ಸರ್ಕಾರದವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಸದಸ್ಯರು ಕೊಟ್ಟಂತಹ ಸೂಚನೆಯನ್ನು ಗಮನಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ —ಈಗ ಟ್ರಜರಿ ಸಿಸ್ಟಮ್ ಮಾಡಿರುವುದರಿಂದ ಒಂದು ರೀತಿ ಒಳ್ಳೆಯದಿದ್ದರೂ ಈ ಟ್ರಜರಿ ಕ್ಯಾಷಿಯರ್‌ರವರನ್ನು ವರ್ಗಾವಣೆ ಮಾಡುವುದರಿಂದ ಬಿಡಿಂಟಟಿ ಮಾಡಬೇಕಾದ ಸಂದರ್ಭ ಗಳು ಬಂದಾಗ ಜನರಿಗೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಕ್ಯಾಷಿಯರ್‌ರವರನ್ನು ವರ್ಗಾವಣೆ ಮಾಡತಕ್ಕಂಥ ವಿಷಯದಲ್ಲಿ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು. —ಒಳ್ಳೆಯ ಸಲಹೆ.

ಶ್ರೀ ದೊಡ್ಡ ಬೋರೇಗೌಡ. —ನಮ್ಮ ತಾಲ್ಲೂಕಿನಲ್ಲಿ ಪೋಸ್ಟ್ ಮ್ಯಾನ್ ಏನು ಮಾಡುತ್ತಾನೆಂದರೆ ಬಕ್ಷೀಸ್ ಕೊಡದೇ ಹೋದರೆ ಆತನು ಸತ್ತೇಹೋಗಿದ್ದಾನೆಂದು ಸರ್ಟಿಫೈ ಮಾಡಿ ವಾಪಸ್ ಕಳುಹಿಸಿ ಕೊಟ್ಟುಬಿಡುತ್ತಾರೆ. ಮತ್ತೆ ಈ ತಾಲ್ಲೂಕಿನಲ್ಲಿ ತೆಗೆದುಕೊಳ್ಳಿ ಎಂದು ಹೇಳುವುದು ಇಲ್ಲವೇ ರಾಮನಗರದ ತಾಲ್ಲೂಕಿನವರಿಗೆ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ತೆಗೆದುಕೊಳ್ಳಿ ಎಂದು ಹೇಳತಕ್ಕಂಥ ನಿದರ್ಶನ ಗಳು ಇರುತ್ತವೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. —ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಕೊಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್. —ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸುವುದನ್ನು ಖಿಏನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ,

ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಯೋಜನೆಯ ಬಗ್ಗೆ

೧೬೫. ಶ್ರೀ ಬಿ. ಆರ್. ಯಾವಗಲ್ (ನರಗುಂದ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬರಿಗಾಲ ಪೈದ್ಯರ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಯೋಜನೆಯನ್ನು ೧೯೭೮ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದದ್ದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈಗ ಇದನ್ನು ಕೈಬಿಡಲು ಕಾರಣವೇನು ?

ಇ) ಈ ಮಾರ್ಗದರ್ಶಿಗಳಿಗೆ ಎಷ್ಟು ಸಂಬಳ ಕೊಡಲಾಗುತ್ತಿದೆ. ಹಾಗೂ ಔಷಧಿಗಳ ಪೂರೈಕೆ ಎಷ್ಟು ಮಾಡಲಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು)

ಅ) ಹೌದು.